

# ಕಬ್ಬಿಣದ ದೋಣಿ!



ದೋಣಿಯನ್ನು ಮರದಿಂದ ಮಾಡುವುದು ಎಲ್ಲರಿಗೂ ಗೊತ್ತು. ನಾವಿಕ ಹಾಯಿಗಳನ್ನು ಬಳಸಿ ನೀರನ್ನು ತಳ್ಳುತ್ತಾ ಮುಂದೆ ಸಾಗುತ್ತಾ ದೋಣಿ ನಡೆಸುತ್ತಾನೆ. ಏಕೆಂದರೆ ಮರದಿಂದ ಮಾಡಿದ ದೋಣಿ ನೀರಿನಲ್ಲಿ ಸರಾಗವಾಗಿ ತೇಲುತ್ತಾ ತೆವಳುತ್ತಾ ಸಾಗುತ್ತದೆ. ಆದರೆ ಚಿತ್ರದಲ್ಲಿರುವ ಈ ದೋಣಿಯನ್ನು ಗಮನಿಸಿ. ಇದನ್ನು ಕಬ್ಬಿಣದಿಂದ ಮಾಡಲಾಗಿದೆ.

ಈ ಕಬ್ಬಿಣದ ದೋಣಿಯನ್ನು ಅಮೆರಿಕದ ಮಿಸ್ಸೌರಿ ರಾಜ್ಯದ `ಸ್ಟಾಂಟನ್' ನಲ್ಲಿರುವ ಮೆರಮಿಕ್ ಗುಹೆಯಲ್ಲಿ ಸಂರಕ್ಷಿಸಿ ಇಡಲಾಗಿದೆ. 1860ನೇ ಇಸವಿಯ ಈ ದೋಣಿಯು ಮೆರಮಿಕ್ ನದಿ ತೀರದಲ್ಲಿ ದಶಕಗಳ ಕಾಲ ಮಣ್ಣಿನಲ್ಲಿ ಹೂತು ಹೋಗಿತ್ತು. ಇದು 400 ಪೌಂಡ್ ತೂಕವಿದ್ದು ಗಂಟೆಗೆ 15 ಮೈಲಿ ಚಲಿಸಬಲ್ಲ ಸಾಮರ್ಥ್ಯ ಹೊಂದಿತ್ತು. ಇದರಲ್ಲಿ 3 ರೆಕ್ಕೆಗಳಿದ್ದು ಚಿಕ್ಕ ಸ್ಟೀಮ್ ಎಂಜಿನ್ ಕೂಡ ಇದೆ. ಗುಹೆಯಲ್ಲಿದ್ದ ಪೊಟ್ಯಾಶಿಯಮ್ ನೈಟ್ರೇಟ್‌ನಿಂದ ತಯಾರಾದ ಗನ್ ಪೌಡರ್ ಅನ್ನು ಅಮೆರಿಕದ ಪಡೆಗಳಿಗೆ ಈ ದೋಣಿಯಲ್ಲಿ ಸಾಗಾಣಿಕೆ ಮಾಡಲಾಗುತ್ತಿತ್ತು. ಮೆರಮಿಕ್ ಗುಹೆಗೆ ಪಾಲ್ ಮತ್ತು ನ್ಯಾನ್ಸಿ ಶಲ್ಟ್ ಎಂಬವರು ನೀಡಿದ ಕೊಡುಗೆ ಇದು. ಈ ದೋಣಿ ಸದ್ಯ ಯಾವುದೇ ಚಲನೆ ಇಲ್ಲದೆ ತಟಸ್ಥವಾಗಿ ನಿಂತಿದೆ.



■ ಸೀತಾ ಎಸ್. ನಾರಾಯಣ